Regd No B G. 155

Sri

14—10—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸಹಕಾರ:— ಅಂಮನೆ ಸಿಂಸ್ಕೆದಾರ್ ಎಂ ವಿ. ಸುಬ್ಬರಾಯುರು [2 ನಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ ೩೦ ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ವಿವಿಧ ವಿಷಯಗಳು

ವಾಷಿಂಗ್ಟನ್— 1964 ರ ಅಮೇರಿಕಾಧ್ಯಕ್ಷತೆಯ ಚುನಾವಣೆಯಲ್ಲಿ ಸ್ಪರ್ಧಿಸಿರುವ ಡೆಮೊಕ್ರಾಟಿಕ್ ಹಾಗೂ ರಿಪಬ್ಲಿಕ್ಕಿನ ಸ್ಪರ್ಧಿಗಳಿಬ್ಬರ ಚುನಾವಣಾ ಪ್ರಚಾರಗಳು ಆವರ ಕುಟುಂಬಗಳ ವ್ಯವಹಾರವಾಗಿದೆ ; ಅವರ ಹೆಂಡತಿ ಮಕ್ಕಳು ಒಬ್ಬಾಗಿಯೂ ಬೇರೆ ಬೇರೆಯಾಗಿಯೂ ಮತಗಳಿಗೆ ಪ್ರಚಾರ ಪ್ರವಾಸ ಕಾರ್ಯಗಳನ್ನು ಮಾಡುತ್ತಿದ್ದಾರೆ.

★

ಅಮೇರಿಕಾದ 50 ರಾಜ್ಯಗಳ ಮತದಾರರು ನವೆಂಬರು 3 ರಂದು ಅಧ್ಯಕ್ಷತೆಯ ಹಾಗೂ ಕಾಂಗ್ರೆಸು ಸದಸ್ಯ ಚುನಾವಣೆಗಳಲ್ಲಿ ಮತನೀಡುವರು : ಅಂದೇ 25 ರಾಜ್ಯಗಳ ಮತದಾರರು ಗವರ್ನರುಗಳನ್ನೂ ಚುನಾಯಿಸುವರು.

★

ಬರ್ಲಿನ್— ಸೆಪ್ಟಂಬರು 19 ರಿಂದ ಈ ತಿಂಗಳ 4 ನೇ ತಾರೀಖಿನವರೆಗೆ ಬರ್ಲಿನ್ನಿನಲ್ಲಿ ನಡೆದ ಅಫ್ರೋ-ಏಷ್ಯಾ ಸಮ್ಮೇಳನದಲ್ಲಿ ಭಾರತೀಯ ವಸ್ತುಗಳು ಅಸಂಖ್ಯ ಪ್ರೇಕ್ಷಕರನ್ನು ಆಕರ್ಷಿಸಿತು : ತತ್ಫಲವಾಗಿ ವ್ಯಾಪಾರವೂ ಚೆನ್ನಾಗಿ ನಡೆಯಿತು ; ಭಾರತವು ಪ್ರದರ್ಶಿಸಿದ ರತ್ನಕಂಬಳಗಳೂ, ರೇಶ್ಮೆ ವಸ್ತ್ರಗಳೂ ಎಲ್ಲರ ಮೆಚ್ಚುಗೆಗೂ ಪಾತ್ರವಾದವು : ಅಫ್ರೋ ಏಷ್ಯನ್ ವಸ್ತುಗಳಿಗೆ ಜರ್ಮನಿಯಲ್ಲಿ ಹೆಚ್ಚಿನ ಗಿರಾಕಿ ಇದೆಯೆಂದು ಈ ವಸ್ತು ಪ್ರದರ್ಶನವು ಶ್ರುತಪಡಿಸಿದೆ

ಆಹ್ವಾನಿಸಿಲ್ಲ

ಉತ್ತರ ರೊಡೇಷಿಯಾದ ಸ್ವಾತಂತ್ರೋತ್ಸವಕ್ಕೆ ಕಾಂಗೋ ಪ್ರಧಾನಿ ಜೋಂಜೆಯುವಂನು ಆಹ್ವಾನಿಸುವದಿಲ್ಲ.

ಅಧ್ಯಕ್ಷ ನಾಸೆರ್‌ರು ಭಾರತದ ಭಾರಿ ಸ್ನೇಹಿತರೆಂದು ಪ್ರಧಾನಿ ಶ್ರೀ ಲಾಲ ಬಹದ್ದೂರ ಶಾಸ್ತ್ರಿಯವರು ನವದೆಹಲಿಯಲ್ಲಿ ತಿಳಿಸಿದ್ದು.

★

ಸಂದರ್ಶನ

ಈ ವಾರ ಕಡೆ ಅಥವಾ ಸವೆಂಬರು ಮೊದಲಲ್ಲಿ ಭಾರತ ಪಾಕಿಸ್ತಾನ ಗೃಹ ಮಂತ್ರಿಗಳು ಭೇಟಿ ಮಾಡುವ ಸಂಭವವಿದೆಯೆಂದು ನವದೆಹಲಿ ವಾರ್ತೆ

★

ತೀರ್ಥೋತ್ಸವ

ಕಾವೇರಿ ಸಂಕ್ರಮಣವನ್ನು 16, 17 ರಲ್ಲಿ ಆಚರಿಸಲಾಗುವುದು ಎಂದು ಮಡಿಕೇರಿ ವಾರ್ತೆ ತೀರ್ಥೋತ್ಸವವು 17 ರ ಬೆಳಿಗ್ಗೆ 11-15 ಗಂಟೆಗೆ ಅಗುವುದೆಂದು ದೇವಾಲಯದ ಆಡಳಿತಗಾರರು ಪ್ರಕಟಿಸಿದ್ದಾರೆ.

★

ಅನಾಹುತ

ರಾವಲ್ಪಿಂಡಿಗೆ ಮೂವತ್ತು ಮೈಲಿಗಳ ದೂರದಲ್ಲಿ ಒಂದು ಬಸ್ಸು ಸಾವಿರ ಅಡಿಗಳ ಕೆಳಗೆ ಬಿದ್ದು ಅದರಲ್ಲಿದ್ದ 19 ಪ್ರಯಾಣಿಕರು ಸಕ್ಕರು

★

ದಿನಾಚರಣೆ

ಈ ವಾರ 20 ರಂದು ಭಾರತದ ಆದ್ಯಂತ ಭಾವೈಕ್ಯ ದಿನಾಚರಣೆ ಆಚರಿಸಲ್ಪಡುವುದು ಇತರ ರಾಷ್ಟ್ರೀಯ ದಿನಗಳಲ್ಲಿ ಹಾರಿಸುವಂತೆ ಆ ದಿನ ಅನಿರ್ಬಂಧವಾಗಿ ರಾಷ್ಟ್ರಧ್ವಜವನ್ನು ಹಾರಿಸಬಹುದು.

ಟೈಸ್ಟಿನ ನಿರ್ಮಾಣ

ಹೈದರಾಬಾದು— ಪ್ರಖ್ಯಾತ ತೆಲುಗು ನಟ ಶ್ರೀ ಎನ್ ಟಿ ರಾಮುಂರವು 2೧ ಲಕ್ಷ ರೂ ಟ್ರಸ್ಟು ನಿರ್ಮಿಸಿದ್ದಾರೆ : ವಿದ್ಯಾಭ್ಯಾಸ ಮತ್ತು ಧರ್ಮಕಾರ್ಯಗಳಿಗೆ ಸಹಾಯ ನೀಡಲಾಗುವುದು.

★

ಬಂಧನ

ಬೊಂಬಾಯಿ— ಶ್ರೀ ದೇವಜಿ ರತನ್ಸಿ ದಸ್ತಗಿರಿ ಮಾಡಲ್ಪಟ್ಟರು ; ಇವರು ಶಾಸನ ಸಭಾ ಸದಸ್ಯರು ವ.ಶ್ರು ಅಹಾಂಧಾನ್ಯ ವರ್ತಕರ ಸಂಘದ ಅಧ್ಯಕ್ಷರು : ಸರಕಾರಕ್ಕೆ ಸಿ ಫಾರಿ ಭರ್ತಿಮಾಡಿ ಕೊಡದಂತೆ ಸಂಘ ನಿರ್ಣಯಿಸಿದೆ.

★

ಹರ್ಷ ವ್ಯಕ್ತತೆ

ಕೈರೋವಿನಲ್ಲಿ ನಡೆದ ಉನ್ನತಮಟ್ಟ ಶಟಸ್ಥ ರಾಜ್ಯಗಳ ಸಮ್ಮೇಳನವು ಜಯಪ್ರದವಾಗಿದೆಯೆಂದೂ, ತಮಗೆ ಹರ್ಷವುಂಟಾಗಿದೆಯೆಂದೂ ಭಾರತ ವಿದೇಶ ಮಂತ್ರಿ ಶ್ರೀ ಸ್ವರ್ಣಸಿಂಗರು ಹೇಳಿದರು

★

ಜನರ ಆಗಮನ

ಬೊಂಬಾಯಿ— ಪರೇಲಿನ ಬಹುಜನ ವಿಹಾರದಲ್ಲಿ ಪ್ರದರ್ಶಿಸಲ್ಪಟ್ಟಿರುವ ಬುದ್ಧನ ಅವಶೇಷಗಳಿಗೆ ಗೌರವಸಲ್ಲಿಸಲು ಸಿಲೋನ್ನು, ಪೂರ್ವಪಾಕಿಸ್ತಾನ ಮುಂತಾದ ಕಡೆಗಳಿಂದಲೂ ಸೇರಿ ಸಹಸ್ರಗಟ್ಟಲೆ ಜನರು ಬರುತ್ತಿದ್ದಾರೆ ; ಲಂಡನ್ನಿನ ಚಿಸ್ವಿಕ್ಕಿನಲ್ಲಿಯು ನೂತನ ವಿಹಾರದಲ್ಲಿ ಇದನ್ನಿಡಲಾಗುವುದು : ಕೈರೋಗೆ ತೆಗೆದುಕೊಂಡು ಹೋಗಿ ಅಲ್ಲಿಂದ ಸಿಲೋನು ಪ್ರಧಾನಿ ಸಿರಿಮಾವೋರೊಡನೆ ಲಂಡನ್ನಿಗೆ ತೆಗೆದುಕೊಂಡುಹೋಗಲಾಗುವುದು.

—

ಚಿನ್ನ ವಶ

ಬೊಂಬಾಯಿ— ಪಶ್ಚಿಮ ವಿಷ್ಕಾದ ಗೋಬಿನಿಂದ ಬಂದ ಒಬ್ಬ ವಿಮಾನ ಪ್ರಯಾಣಿಕನಿಂದ ಸಾಂತಾಕ್ರಾಸು ವಿಮಾನ ನಿಲ್ದಾಣದಲ್ಲಿ ರೂ 40 ಸಾವಿರ ಮೌಲ್ಯದ ಅಕ್ರಮ ಚಿನ್ನ ಮತ್ತು ಸರಂಜಾಮುಗಳನ್ನು ಬೊಂಬಾಯಿ ಕಸ್ಟಂಸಿನವರು ವಶಪಡಿಸಿಕೊಂಡರು.

—

ಆಸಕ್ತಿ

ನವದೆಹಲಿ— ನ್ಯೂಯಾರ್ಕ್ ವಿಶ್ವ ಸಮ್ಮೇಳನದಲ್ಲಿರುವ ಭಾರತೀಯ ಪಸ್ತು ಪ್ರದರ್ಶನ ಮಂದಿರಕ್ಕೆ ಭೇಟಿಕೊಡುತ್ತಿರುವ ವಾಣಿಜ್ಯೋದ್ಯಮಿಗಳು ಭಾರತದಲ್ಲಿ ತಯಾರಾದ ವಿವಿಧ ಸರಕುಗಳನ್ನು ಅಮದು ಮಾಡಿಕೊಳ್ಳುವ ಬಗ್ಗೆ ತಿ ವ್ಯಾಸಕ್ತಿ ವ್ಯಕ್ತಪಡಿಸುತ್ತಿದ್ದಾರೆ.

—

ಬಂಧನ

ರಾಜಕೋಟೆ— ಇಲ್ಲಿಗೆ ನೂರು ಮೈಲಿ ದೂರದ ದೋರಾಜಿ ಪಟ್ಟಣದಲ್ಲಿ ಮಾಮಲತೆದಾರರ ಅಫೀಸಿನ ಮುಂದೆ ನಡೆದ ಗಲಭೆ ಸಂಬಂಧವಾಗಿ 58 ಮಂದಿ ಬಂಧಿಸಲ್ಪಟ್ಟಿದ್ದಾರೆ : 14 ಮಂದಿ ಪೋಲೀಸರೂ ಸೇರಿ 54 ಮಂದಿ ಬಂಧಿಸಲ್ಪಟ್ಟಿದ್ದಾರೆ.

ಸೇನೆಗೆ ಸೇರ್ಪಡೆ

ಸೂರತ್— 250 ಅದಿವಾಸಿ ಯುವಕರು ಸೈನ್ಯಕ್ಕೆ ಸೇರಿದರು

ಕೇಂದ್ರದ ಗ್ಯಾರಂಟಿ

ಬೆಂಗಳೂರು— ಧರ್ಮಾವತಿ ಕಬ್ಬಿಣ ಕಾರ್ಖಾನೆಗೆ ಪಶ್ಚಿಮ ಜರ್ಮನಿ ಕೊಡಲೊಪ್ಪಿರುವ 7 ಮಿಲಿಯ ವಿದೇಶಿ ಸಾಲಕ್ಕೆ ಕೇಂದ್ರ ಸರಕಾರ ಗ್ಯಾರಂಟಿ ಕೊಡಲಿದೆ

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ ಪಂಪಶ್ಯಕೃಷ್ಣ ಜೋಯಿಸರವರಿಂದ

15 ಗುರುವಾರ ನವಮಿ ಶ್ರವಣ (ಬೆ9.25) ಮಹಾನವಮಿ, ಶೈವಾಲಯೇ ವಿಜಯದಶಮಿ, ಆಯುಧಪೂಜೆ, ವೆಂಕಟೇಶ ಜಯಂತಿ, ಹಯಗ್ರೀವ ಪೂಜಾ

ಲಂಚ ತಾಂಡವಾಡುತ್ತಿದೆ

★

ರೈಲ್ವೇ ಲಂಕ್ಷಣಾ ಪೋಲೀಸರು ಸೀಲುಮಾಡಲ್ಪಟ್ಟಿದ್ದ ಒಂದು ವ್ಯಾಗನ್ನು ಸಂಶಯದ ಮೇಲೆ ತೆಗೆದರು ; ಅದರಲ್ಲಿ 750 ಅಬ್ಕಾರಿ ಪೀಟುಗಳಿದ್ದವು ; ತೊಟ್ಟಿದ್ದ ಡಿಕ್ಲರೇಷನ್ನಿನಂತೆ ಅದುಲ್ಲಿ ಕಲ್ಲಿಜ್ಜಲು ಇಂಜೇಕಾಗಿತ್ತು : ಈಗ ವ್ಯಾನು ಪೂರ್ವ ಪಾಕಿಸ್ತಾನದ ದಾಸರ್ಹಾನಕ್ಕೆ ಹೋಗತಕ್ಕದಾಗಿತ್ತು

ರೈಲ್ವೆ ವಾರ್ತೆಯಂತೆ ಈ ವ್ಯಾಗನ್ ಸಂತಾನಗರ (ಹೈದರಾಬಾದು) ದಿಂದ ಬಾಲಿಗೆ ಬುಕ್‌ಮಾಡಲಾಗಿತ್ತು : ಆದರೆ ಸೀಲ್ ಡಿಕ್ಲರೇಷನ್ನು ಮತ್ತು ಆ ಸಂಬಂಧದ ಕಾಗದಪತ್ರಗಳು ಬದಲಾಯಿಸಲ್ಪಟ್ಟಿದ್ದು, ಒಂಡಾಲಿಂದ ದಾರಾ ಸನಾಕ್ಕೆ ಕಲ್ಲಿಜ್ಜಲು ತೆಗೆದುಕೊಂಡು ಹೋಗುತ್ತಿರುವುದಾಗಿ ಕಾಣಿಸಲ್ಪಟ್ಟಿತ್ತು.

† ಕಲ್ಲಿಜ್ಜಲ ವ್ಯಾನುಗಳು ಸೀಲುಮಾಡಲ್ಪಡುವುದಿಲ್ಲ

ಈ ವ್ಯಾನನ್ನು ಮಾರ್ಗದಲ್ಲಿ ಅನೇಕ ಕಡೆ ಚೆಕ್ ಮಾಡಲಾಗಿತ್ತೆಂದು ಹೇಳಲಾಗಿದೆ

ಕೆಲಕಾಲದ ಹಿಂದೆ ಪಾಕಿಸ್ತಾನಕ್ಕೆ ಹೋಗಲಿದ್ದ ಮತ್ತು ಖಾಲಿ ಎಂದು ಡಿಕ್ಲೇರು ಮಾಡಲಾಗಿದ್ದ ಒಂದು ವ್ಯಾನಿನಲ್ಲಿ 80 ರೈಲ್ವೇ ಸ್ಪೀಪರುಗಳಿದ್ದವು : ಅದು ಖಾನಾ ಜಂಕ್ಷನ್ನಿನಿಂದ ಫರಕ್ಕಾಕ್ಕೆ ಬುಕ್ ಮಾಡಲಾಗಿತ್ತು

§ ಪಾಕಿಸ್ತಾನದ ಜೊತೆ ತಪ್ಪುಹಾಕುವುದು ಸಾಲದು : ಭಾರತದಿಂದ ಪದಾರ್ಥಗಳನ್ನು ಅಕ್ರಮವಾಗಿ ಸಾಗಿಸಿಕೊಳ್ಳುವುದು, ಅನೇಕ ಮಂದಿ ಭಾರತೀಯರು (ಇವರೆಲ್ಲಿ ಮುಸ್ಲಿಂರೇ ಆಗಿಂಬೇಕೆಂಗಿಲ್ಲ) ಸಾಪಾಲಿನಿಂದಲ್ಲದೆ ಸಾಧ್ಯವಿಲ್ಲ : ಆದುದರಿಂದ ರೈಲ್ವೇಯಲ್ಲಿರುವ ಕೆಲವರ ಸಂಬಂಧದಿಂದ ಈ ದ್ರೋಹ ಕಾರ್ಯವು ನಡೆಯುತ್ತಿದೆ

ಈ ದಿನಗಳಲ್ಲಿ ಹಣವು ಎಲ್ಲಪನ್ನೂ ಕೊಳ್ಳಬಹುದು, ಜನಂನ್ನು ದೇಶ ದ್ರೋಹಿಗಳನ್ನಾಗಿ ಮಾಡಬಲ್ಲದು : ನಾವು ಎಷ್ಟು ಕೆಳಮಟ್ಟಕ್ಕೆ ಇಳಿದಿದ್ದೇವೆ !

(ರಾಣಾಘಾಟಿನಿಂದ ಹಿಂ. ಸ್ವಾತ್ಯ. ಸುದ್ದಿಗಾರರ ವರದಿ) [ಟ್ರೂತ್]

ದಸರಾ ಮನರಂಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ

ತಾ || 15 ರಂದು ಟೌನ್‌ಹಾಲಿನಲ್ಲಿ 9 ರಿಂದ 12 ಮತ್ತು 3 ರಿಂದ ೬-೩೦ ರವರೆಗೂ, ಎಗ್ಸಿಬಿಷನ್ನಿನಲ್ಲಿ 6 ರಿಂದ- ಸಂಗೀತ, ಕೊಳಲು, ಭಜನೆ, ನೃತ್ಯವಾದನ, ನಾಗಸ್ವರ, ನೃತ್ಯ ಏರ್ಪಡಿಸಲಾಗಿದೆ.

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ



ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ

ವಿಳಾಸ- ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4.

ವುಡ್‌ಲ್ಯಾಂಡ್ ವೈಭವ 5 ನೇ ವಾರ

.... ಎ. ವಿ. ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ. ಪೂಲ್

ತಾರಾಗಣ- ಅಶೋಕಕುಮಾರ್, ಮೂಲಾ ಸಿನ್ಹಾ, ನಿಮ್ಮಿ, ಧರ್ಮೇಂದರ್, ಪ್ರಾಣ್

[ದಿನವಹ 3 ಪ್ರದರ್ಶನಗಳು]

ಆಪೆರಾ— 10-10-64 ರಿಂದ

ಸುಂದರ ತೆಲುಗು ಚಿತ್ರ [ದಿನ 3 ಆಟಗಳು]

ವೀರಾಂಗನೆ

ತಾರೆ- ಜೆಮಿನಿ ಗಣೇಶ್, ಪದ್ಮಿನಿ, ರಾಗಿಣಿ, ಬಾಲಾಜಿ, ಸುಕುಮಾರಿ, ಅಶೋಕ್

ರಣಜಿತ್‌ನಲ್ಲಿ— ಜನಪ್ರಿಯ 2 ನೇ ವಾರ

— ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ —

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಕಲಾಕೃತಿ

ಮುರಿಯದ ಮನೆ [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು ಪಂಢರೀಬಾಯಿ, ಜಯಂತಿ ಮುಂತಾದವರು ತಾರಾಧಾರಿಗಳು

ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI SUDHA

Superb Tonic

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ವಾರ್ಷಿಕ ಚಂದಾ 50 ನ ಪೈ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4.